


ಮಂಗಳೂರಿನಲ್ಲಿ ಸಯಾನ್‌ನೊಂದಿಗೆ ಕಸಿ ತರಬೇತಿ



ಕಣ್ಣಪುರಂ ನಾಡಮಾವಿನ ಹಬ್ಬದಲ್ಲಿ ದೇಸಿ ಹಣ್ಣುಗಳ ಘಮ

## ನೆಕ್ಕರೆ ಕಣ್ಮರೆ

ಕರಾವಳಿಯ ಮೂಲ ತಳಿ ನೆಕ್ಕರೆ ಮಾವು. ನಾರಿನ ಅಂಶ ಹೆಚ್ಚಿರುವ ನೆಕ್ಕರೆ, ಕೀಟ ಬಾಧೆ ಕಡಿಮೆ ಇರುವ, ನಿರೋಧಕ ಶಕ್ತಿ ಹೆಚ್ಚಿರುವ ತಳಿ. ತೀರಾ ಅಪರೂಪವಾಗಿರುವ ಈ ತಳಿ ಸಂರಕ್ಷಿಸಿಕೊಳ್ಳದಿದ್ದಲ್ಲಿ ಕಣ್ಮರೆಯಾಗುವ ಅಪಾಯವಿದೆ. ಮೂಲೆ ಸೇರಿದ ನೆಕ್ಕರೆಯ ಮೇಲೆ ಈಗ ನಾಮಾಮಿ ದೃಷ್ಟಿ ಬೀರಿರುವುದರಿಂದ ಈ ತಳಿಗೆ ಕಾಯಕಲ್ಪ ಸಿಗಬಹುದೆಂಬ ಆಶಾಭಾವ ಮೂಡಿದೆ.

## ಮಲೆನಾಡಿನಲ್ಲಿ ಮಿಡಿಮಾವಿನ ಸುವಾಸನೆ

ಪರಿಸರ ಬರಹಗಾರ ಶಿವಾನಂದ ಕಳವೆ, ದೇಸಿ ತಳಿಯ ಅಪ್ಪೆಮಿಡಿ ಸಂರಕ್ಷಣೆ ನಿಟ್ಟಿನಲ್ಲಿ 2006ರಲ್ಲಿ ಶಿರಸಿಯಲ್ಲಿ ಮಿಡಿಮಾವಿನ ಉತ್ಸವ ಸಂಘಟಿಸಿದ್ದರು. ಆದಾಗಿ ಎರಡು ವರ್ಷಗಳ ಅಂತರದಲ್ಲಿ ಸಾಗರ, ಮತ್ತಿತರ ಕಡೆಗಳಲ್ಲಿ ಮಿಡಿಮಾವಿನ ಮೇಳಗಳು ನಡೆದವು. ಇದರಿಂದ ದಾಖಲೀಕರಣ, ಉಪ್ಪಿನಕಾಯಿ ತಯಾರಿಕೆ ಬಗ್ಗೆ ಕೆಲಸ ನಡೆದವು.

‘ಅರಣ್ಯ ಇಲಾಖೆ ಜೊತೆಗಿನ ಸಂಪರ್ಕ ಬಳಸಿಕೊಂಡು ಅರಣ್ಯ ನರ್ಸರಿಗಳಲ್ಲಿ ಇರುವ ಮಾವಿನ ಗಿಡಗಳನ್ನು ಕಸಿ ಕಟ್ಟುವ ಹಳ್ಳಿಯ ಯುವಕರಿಗೆ ಕಡಿಮೆ ದರದಲ್ಲಿ ಕೊಡಿಸಲು ಸಾಧ್ಯವಾಯಿತು. ಆ ಮೂಲಕ ತಳಿ ಉಳಿಸುವ ಕಾರ್ಯ ತಣ್ಣಗೆ ನಡೆಯಿತು. ಚೌತಿ ಅಪ್ಪೆ, ಮಾಳಂಜಿ ಅಪ್ಪೆ, ಹಳದೋಟದ ಅಪ್ಪೆ ಹೀಗೆ ನೂರಾರು ಮಿಡಿಮಾವಿನ ಕಸಿಗಿಡಗಳು ಸಿದ್ಧವಾದವು. ಊರ ಸುತ್ತಲಿನ ಆಸಕ್ತರು ಆಗ ನೆಟ್ಟಿರುವ ಕಸಿ ಅಪ್ಪೆಗಿಡಗಳು ಈಗ ಫಸಲು ಕೊಡುತ್ತಿವೆ. ದಶಕಗಳ ಹಿಂದೆ ನಡೆದಿರುವ ಕಾರ್ಯಕ್ಕೆ ಮಲೆನಾಡಿನ ಬೆಟ್ಟಗಳು ಕನ್ನಡಿಯಾಗಿವೆ’ ಎನ್ನುತ್ತಾರೆ 70ಕ್ಕೂ ಹೆಚ್ಚು ಮಾವು ತಳಿಗಳನ್ನು ಬೆಳೆಸಿರುವ ಶಿವಾನಂದ ಕಳವೆ.

ಕೈಚಳಕ ನಾಡ ತಳಿಯೊಂದನ್ನು ಉಳಿಸಿತು’ ಎನ್ನುತ್ತಾರೆ ಜಯರಾಮ.

“ಪತ್ನಿ ಭಾರತಿಯ ನೆನಪಿನಲ್ಲಿ ನಮ್ಮ ಮನೆಯ ನಾಡಮಾವಿಗೆ ‘ಭಾರತಿ’ ಎಂದು ಹೆಸರಿಸಲಾಗಿದೆ. ಇದೇ ಮರದ ಕಸಿ ಗಿಡ ನೆಡುವುದರೊಂದಿಗೆ ಮೊಮ್ಮಗನ ಮೊದಲ ಹುಟ್ಟುಹಬ್ಬ ಆಚರಿಸಿದೆವು. ಮಾವು ಪ್ರಿಯರ ತೋಟಗಳಲ್ಲಿ ನಾಡಮಾವು ಜಾಗ ಗಿಟ್ಟಿಸಿಕೊಂಡಿದೆ, ಪ್ರತಿಷ್ಠಿತ ನರ್ಸರಿಗಳಲ್ಲಿ ನಾಡಮಾವು ಗಿಡಗಳು ಸ್ಥಾನ ಪಡೆದಿವೆ. ಅಷ್ಟರ ಮಟ್ಟಿಗೆ ದಕ್ಷಿಣ ಕನ್ನಡದಲ್ಲಿ ನಾಡ ಮಾವು ತನ್ನ ಕಂಪನ್ನು ಬೀರಿದೆ” ಎನ್ನುವುದು ಜಯರಾಮ ಅಜ್ಜಾವರ ಅವರ ಅಭಿಪ್ರಾಯ.

### ನಾಮಾಮಿ ರಾಯಭಾರಿಗಳು

ಬೆಂಗಳೂರಿನ ನಿವಾಸಿ ಶ್ರೀಶ ಹೆಗಡೆ, ಉತ್ತರ ಕನ್ನಡ ಜಿಲ್ಲೆ ಭಟ್ಕಳದ ಸಮೀಪ ಮುರಕಲ್ಲಿನ ಜಾಗದಲ್ಲಿ ನಾಡಮಾವು, ಜೀರಿಗೆ ಅಪ್ಪೆಮಿಡಿ, ಹಲಸಿನ ದೇಸಿ ತಳಿಗಳ ವಿಭಿನ್ನ ತೋಟ ಸೃಷ್ಟಿಸಲು ಸಿದ್ಧರಾಗಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ರಘುರಾಜ್ ಅವರು, ನಿಟಿಲೆಯ ದುರ್ಗಮ ಜಾಗದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡಿಕೊಂಡು, 250ರಷ್ಟು ನಾಡಮಾವು ಸಸಿಗಳನ್ನು ನಾಟಿ ಮಾಡಿದ್ದಾರೆ.

ಕುಮಟಾದ ಗಣೇಶ ಭಟ್ಟರು, ವಿಶಿಷ್ಟ ತಳಿಯ ಮಾಣಿಭಟ್ಟ, ವಿರಳವಾಗಿರುವ ಬಿಳಿ ಇಶಾಡು ತಳಿಗಳ ಬಗ್ಗೆ ಅತೀವ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಕಸಿ ಕಟ್ಟುವ ಸರ್ವೇಶ್ ರಾವ್, ಗುರುರಾಜ ಬಾಳ್ತಿಲ್ಲಾಯರು ಇವರೆಲ್ಲ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದವರು. ಇಂತಹವರೇ ನಾಮಾಮಿಯ ರಾಯಭಾರಿಗಳು ಎಂದು ಸ್ಮರಿಸಿಕೊಳ್ಳುತ್ತಾರೆ ಮನೋಹರ ಉಪಾಧ್ಯರು.

ಪ್ರತಿಕ್ರಿಯಿಸಿ: feedback@sudha.co.in